3. 2 ವರದಿಗಳು

4. ಆಡಳಿತ ಸುಧಾರಣಾ ಆಯೋಗವು ತನ್ನ ಮಧ್ಯಂತರ ವರದಿಯ
ಸಚಿವಾಲಯದ ಸುಧಾರಣೆ, ಜಿಲ್ಲಾ ಆಡಳಿತ ಸುಧಾರಣೆ ಮತ್ತು ಉತ್ತಮ ಆಡಳಿ
ನೀಡುವ ಬಗ್ಗೆ ಶಿಫಾರಸ್ಸು ಮಾಡಿದೆ. ತನ್ನ ಅಂತಿಮ ವರದಿಯಲ್ಲಿ ಆಯೋಗವು ಈ
ಕೆಳಗಿನ ವಿಷಯಗಳ ಬಗ್ಗೆ ಶಿಫಾರಸ್ಸು ಮಾಡಿದೆ.

1. ಸರಿಗಾತ್ರದ ಕ್ರಮಗಳು

2. ಆರ್ಥಿಕ ಮಿತವ್ಯಯದ ಕ್ರಮಗಳು

3. ಆಡಳಿತಾತ್ಮಕ ಕ್ರಮಗಳು

4. ವೃತ್ತಿಯ ಆಯ್ಕೆಯ ಅವಕಾಶಗಳು

5. ಇ-ಆಳ್ವಿಕೆ

6. ಪ್ರಕಾರ್ಯಗಳ ಪುನರಾವಲೋಕನ ನಡೆಸಿದ 13 ಇಲಾಖೆಗಳಿಗ
ಸಂಬಂಧಿಸಿದಂತೆ ಶಿಫಾರಸ್ಸುಗಳು

7. ಸಣ್ಣ ಯೋಜನೆಗಳನ್ನು ವಿಲೀನಗೊಳಿಸುವುದು.

8. ಬೇರೆಯವರಿಗೆ ವಹಿಸುವ ಕ್ಷೇತ್ರಗಳನ್ನು ಗುರುತಿಸುವುದು.

5. ವರ್ಗಾವಣೆ ನೀತಿ, ಸಾರ್ವಜನಿಕ ಸನ್ನದುಗಳ ತಯಾರಿಕೆ ಸಚಿವಾಲಯದಲ್ಲಿ ಏಕ
ಕಡತ ಪದ್ಧತಿ ಹಾಗೂ ಪೀಠಾಧಿಕಾರಿ ಪದ್ಧತಿ. ಭ್ರಷ್ಟಾಚಾರ ನಿರ್ಮೂಲನ ಉನ್ನತ
ಸಮಿತಿಯನ್ನು ರಚಿಸುವುದು ಇತ್ಯಾದಿಗಳನ್ನು ಒಳಗೊಂಡಂತೆ ಮಧ್ಯಂತರ ವರದಿಯಲ್ಲಿನ
ಶಿಫಾರಸ್ಸುಗಳನ್ನು ಜಾರಿಗೊಳಿಸಲಾಗಿದೆ.

ಅಂತಿಮ ವರದಿಯನ್ನು ದಿನಾಂಕ: 27.12.2001ರಂದು ನೀಡಲಾಗಿದ್ದು
ಶಿಫಾರಸ್ಸುಗಳನ್ನು ಪರಿಶೀಲಿಸಿ ಹಂತಹಂತವಾಗಿ ಜಾರಿಗೆ ತರಲು ಕ್ರಮ
ತೆಗೆದುಕೊಳ್ಳಲಾಗುವುದು.

ವಿಧಾನಸೌಧ ಪ್ರವೇಶಕ್ಕೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 10(472)

ಸದಸ್ಯರ ಹೆಸರು: ಶ್ರೀ ದಿನೇಶ್ ಗುಂಡೂರಾವ್(ಗಾಂಧೀನಗರ)

ಉತ್ತರಿಸುವ ಸಚಿವರು: ಶ್ರೀ ಎಸ್.ಎಂ.ಕೃಷ್ಣ(ಮುಖ್ಯ ಮಂತ್ರಿಗಳು)

ಪ್ರಶ್ನೆ

ಅ. ರಾಜ್ಯದ ಆಡಳಿತ ಕೇಂದ್ರವಾದ ವಿಧಾನಸೌಧಕ್ಕೆ ಒದಗಿಸಲಾಗಿರುವ ಭದ್ರತೆಯಿಂದ ಸಾರ್ವಜನಿಕರ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ. ಹಾಗಿದ್ದಲ್ಲಿ ತಮ್ಮ ಕೆಲಸ ಕಾರ್ಯಗಳಿಗಾಗಿ ದೂರದ ಊರುಗಳಿಂದ ವಿಧಾನಸೌಧಕ್ಕೆ ಬರುವ ಸಾರ್ವಜನಿಕರಿಗೆ ಸಚಿವರು ಹಾಗೂ ಅಧಿಕಾರಿಗಳನ್ನು ಭೇಟಿ ಮಾಡಲು ಸರ್ಕಾರ ಯಾವ ರೀತಿ ಅನುಕೂಲಗಳನ್ನು ಕಲ್ಪಿಸಿ ಕೊಡಲಾಗುವುದು?

ಉತ್ತರ

ಅ. ಇಲ್ಲ

ಆ. ಹಿಂದೆ ಮಧ್ಯಾಹ್ನ 3.30ರಿಂದ 5.00 ಘಂಟೆಯವರೆಗೆ ಇದ್ದ ಸಂದರ್ಶನ ವೇಳೆಯನ್ನು 3.00 ಘಂಟೆಯಿಂದ 5.00 ಘಂಟೆಯವರೆಗೆ ವಿಸ್ತರಿಸಿ ಪ್ರಸ್ತುತ ನಿಗದಿಪಡಿಸಲಾಗಿದೆ. ಸಂದರ್ಶನ ವೇಳೆಯನ್ನು ಹೊರಡುಪಡಿಸಿ, ಸಚಿವರು ಅಥವಾ ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡಬೇಕೆಂದು ಅನಿರೀಕ್ಷಿತವಾಗಿ ಸಾರ್ವಜನಿಕರು ಬಂದಲ್ಲಿ ಸಂಬಂಧಿಸಿದ ಸಚಿವರು ಅಥವಾ ಹಿರಿಯ ಅಧಿಕಾರಿಯ ಆಪ್ತ ಕಾರ್ಯದರ್ಶಿಯವರೊಂದಿಗೆ ಸಂಪರ್ಕಿಸಿ, ಭೇಟಿ ಮಾಡಬಹುದೆಂದು ತಿಳಿಸಿದಲ್ಲಿ, ಅಂಥಹವರಿಗೆ ಅವಕಾಶ ನೀಡಲಾಗುತ್ತದೆ. ಅಲ್ಲದೆ, ಸಚಿವರು ಹಾಗೂ ಹಿರಿಯ ಅಧಿಕಾರಿಗಳೊಂದಿಗೆ ಪೂರ್ವಭಾವಿಯಾಗಿ ಸಂದರ್ಶನವನ್ನು ನಿಗದಿಪಡಿಸಿಕೊಂಡಿದ್ದಲ್ಲಿ ಮತ್ತು ಅಂತಹ ಸಾರ್ವಜನಿಕರಿಗೆ ಪ್ರವೇಶ ನೀಡಲು ಸಂಬಂಧಪಟ್ಟ ಸಚಿವರ ಅಥವಾ ಹಿರಿಯ ಅಧಿಕಾರಿಗಳ ಆಪ್ತ ಕಾರ್ಯದರ್ಶಿಗಳು ಕೋರಿಕೆ ಸಲ್ಲಿಸಿದಲ್ಲಿ, ಅಂಥಹವರಿಗೂ ಸಹ ಪ್ರವೇಶಾವಕಾಶ ನೀಡಲಾಗುತ್ತಿದೆ.

ಆಡಳಿತ ಸುಧಾರಣಾ ಆಯೋಗದ ವರದಿ ಅನುಷ್ಠಾನ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 11(483)